# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** :**496**

**ಮಾನ್ಯ ಸದಸ್ಯರ ಹೆಸರು** :**ಡಾ: ಉಮಾಶ್ರೀ**

**(ನಾಮನಿರ್ದೇಶನ ಹೊಂದಿದವರು)**

**ಉತ್ತರಿಸುವ ದಿನಾಂಕ** :**20.08.2026**

**ಉತ್ತರಿಸುವ ಸಚಿವರು** :**ಗೃಹ ಸಚಿವರು**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದೇಶದಲ್ಲಿ ದಾಖಲಾಗುತ್ತಿರುವ ಸೈಬರ್ ಪ್ರಕರಣಗಳಲ್ಲಿ ದಕ್ಷಿಣ ಭಾರತದ ಐದು ರಾಜ್ಯಗಳಲ್ಲಿ ಕರ್ನಾಟಕದಲ್ಲಿ ಶೇಕಡ 15.6 ರಷ್ಟು ಸೈಬರ್ ಕ್ರೈಮ್ ನಡೆದಿರುವುದು ನಿಜವೇ; 3 ವರ್ಷಗಳ ಅವಧಿಯಲ್ಲಿ ರಾಜ್ಯವು ಸೈಬರ್ ಕ್ರೈಮ್‌ನಲ್ಲಿ ಎಷ್ಟನೇ ಸ್ಥಾನದಲ್ಲಿದೆ;</td><td>ಭಾರತೀಯ ಅಪರಾಧ ದಾಖಲಾತಿ ವಿಭಾಗ ಪ್ರಕಟಿಸಿರುವ 2024ನೇ ಅಪರಾಧ ಅಂಕಿ-ಅಂಶಗಳ ವರದಿಯಂತೆ ದೇಶದಲ್ಲಿ 2024ನೇ ಸಾಲಿನಲ್ಲಿ 1,01,118 ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿರುತ್ತವೆ.<br><br>ಅವುಗಳಲ್ಲಿ ದಕ್ಷಿಣ ಭಾರತದ ಐದು ರಾಜ್ಯಗಳಲ್ಲಿ 66,506 ಸೈಬರ್ ಪ್ರಕರಣಗಳು ವರದಿಯಾಗಿರುತ್ತವೆ. ಅದರಂತೆ ಕರ್ನಾಟಕ ರಾಜ್ಯವು ಎರಡನೇ ಸ್ಥಾನದಲ್ಲಿ ಇರುತ್ತದೆ.</td></tr>
<tr><td>ಆ)</td><td>ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಕಳೆದ 5 ವರ್ಷಗಳ ಅವಧಿಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಹಾಗೂ ಎಷ್ಟು ಮಂದಿ ಅಪರಾಧಿಗಳನ್ನು ಬಂಧಿಸಲಾಗಿದೆ; ಅವರಿಂದ ವಸೂಲಿಯಾಗಿರುವ ಹಣವೆಷ್ಟು?</td><td>ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ದಾಖಲಾಗಿರುವ ಸೈಬರ್ ಅಪರಾಧಗಳ ಪ್ರಕರಣಗಳ ಸಂಖ್ಯೆ ಮತ್ತು ಬಂಧಿಸಲಾದ ಅಪರಾಧಿಗಳ ಸಂಖ್ಯೆ ಮತ್ತು ವಸೂಲಿಯಾಗಿರುವ ಮೊತ್ತ ವಿವರಗಳು ಕೆಳಕಂಡಂತಿದೆ:
<table>
<tr><th>ವರ್ಷ</th><th>ಸೈಬರ್ ಅಪರಾಧಗಳ ಸಂಖ್ಯೆ</th><th>ಬಂಧಿಸಲಾದ ಅಪರಾಧಿಗಳ ಸಂಖ್ಯೆ</th><th>ವಸೂಲಿಯಾಗಿರುವ ಮೊತ್ತ (ರೂ.ಗಳಲ್ಲಿ)</th></tr>
<tr><td>2022</td><td>12869</td><td>661</td><td>1,15,60,57,162</td></tr>
<tr><td>2023</td><td>22221</td><td>773</td><td>1,70,67,62,925</td></tr>
<tr><td>2024</td><td>22429</td><td>928</td><td>3,89,81,22,984</td></tr>
<tr><td>2025</td><td>14844</td><td>991</td><td>2,65,91,90,891</td></tr>
<tr><td>2026ಜುಲೈ</td><td>7063</td><td>365</td><td>5,68,49,508</td></tr>
</table>
ಸೈಬರ್ ಕ್ರೈಂ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿವೆ:<br>
• ಕರ್ನಾಟಕ ರಾಜ್ಯದಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗುತ್ತಿದ್ದು, ರಾಜ್ಯದಲ್ಲಿ ಹೆಚ್ಚಾಗುತ್ತಿರುವ ಸೈಬರ್ ಅಪರಾಧ ಪ್ರಕರಣಗಳನ್ನು ಸಮರ್ಪಕವಾಗಿ ತಡೆಯಲು ಮತ್ತು ತನಿಖೆಯನ್ನು ನಡೆಸಿ ನೊಂದವರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಭಾರತದಲ್ಲಿಯೇ ಮೊದಲನೇ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಸೈಬರ್ ಕಮಾಂಡ್ (Cyber Command) ಘಟಕವನ್ನು ಡಿಜಿಪಿ, ಸೈಬರ್ ಕಮಾಂಡ್ ರವರ ನೇತೃದಲ್ಲಿ ಸೃಜಿಸಲಾಗಿರುತ್ತದೆ. ಸದರಿ ಕರ್ನಾಟಕ ಸೈಬರ್ ಕಮಾಂಡ್ ಘಟಕದಲ್ಲಿ</td></tr>
</table>

| | | |
|---|---|---|
| | | ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಪೈಕಿ ಡಿಜಿಪಿ, ಸೈಬರ್ ಕಮಾಂಡ್, ಮತ್ತು ಮೂವರು ಪೊಲೀಸ್ ಅಧೀಕ್ಷಕರುಗಳಾದ 1) ಎಸ್‌ಪಿ, ಸಿಸಿಡಿ, 2) ಎಸ್‌ಪಿ ಸಿಟಿ&ಆರ್, 3) ಎಸ್‌ಪಿ ವಿಶೇಷ (Cyber Special Cell) (ಎನ್‌ಓಸಿ ಹುದ್ದೆಯನ್ನು ಮರು ನಾಮೀಕರಿಸಿ ಎಸ್‌ಪಿ ವಿಶೇಷ ಕೋಶವೆಂದು) ಮತ್ತು ರಾಜ್ಯದ್ಯಂತ ಇರುವ 43 ಸೈಬರ್ ಕ್ರೈಂ ಪೊಲೀಸ್ ಠಾಣೆಗಳಿಗೆ ಅದರ ಮೇಲ್ವಿಚಾರಕರಾಗಿ ಸಂಬಂಧಪಟ್ಟ ವಲಯಗಳಲ್ಲಿ ಕೇಂದ್ರ ಸ್ಥಾನದಲ್ಲಿರುವ ಪೊಲೀಸ್ ಅಧೀಕ್ಷಕರುಗಳನ್ನು ಲಿಂಕ್ ಅಧಿಕಾರಿಗಳನ್ನಾಗಿ ನಿಯೋಜಿಸಲಾಗಿರುತ್ತದೆ.<br>• ಭಾರತ ಸರ್ಕಾರದ ಗೃಹ ವ್ಯವಹಾರಗಳ ಸಚಿವಾಲಯದ (MHA) ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇಂಡಿಯನ್ ಸೈಬರ್ ಕ್ರೈಮ್ ಕೋಆರ್ಡಿನೇಷನ್ ಸೆಂಟರ್ (I4C) ಮಾದರಿಯಲ್ಲಿ, ರಾಜ್ಯ ಮಟ್ಟದಲ್ಲಿ ಸೈಬರ್ ಅಪರಾಧಗಳ ನಿಯಂತ್ರಣ, ತಡೆಗಟ್ಟುವಿಕೆ, ತನಿಖೆ ಹಾಗೂ ಸೈಬರ್ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಕರ್ನಾಟಕ ಸೈಬರ್ ಕಮಾಂಡ್ ಸೆಂಟರ್ (K4C) ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br>• ಕೆ-ಸಿಇಆರ್‌ಟಿ (K-CERT) ಕೇಂದ್ರವನ್ನು ಇತ್ತೀಚೆಗೆ ಅಧಿಸೂಚನೆ ಮೂಲಕ ಸ್ಥಾಪಿಸಲಾಗಿದೆ.<br>• ಮಹಿಳಾ ಮತ್ತು ಮಕ್ಕಳ ಸೈಬರ್ ಸುರಕ್ಷತಾ ದಳವನ್ನು, ಗೃಹ ವ್ಯವಹಾರಗಳ ಸಚಿವಾಲಯದ (MAH) OCPW ಮಾದರಿಯಲ್ಲಿ ರಚಿಸಲಾಗಿದೆ.<br>• ಪ್ರತಿ ಜಿಲ್ಲೆಯಲ್ಲಿ ಹಾಗೂ ನಗರ ವ್ಯಾಪ್ತಿಯಲ್ಲಿ ಒಂದೊಂದು ಸೈಬರ್ ಪೊಲೀಸ್ ಠಾಣೆಗಳನ್ನು (ಸಿ.ಸಿ.ಪಿ.ಎಸ್ ಪೊಲೀಸ್ ಠಾಣೆ) ತೆರೆಯಲಾಗಿರುತ್ತದೆ. ಅಲ್ಲದೆ ಪ್ರತಿ ಠಾಣೆಗಳಲ್ಲಿಯೂ ಸಹ ದೂರನ್ನು ಸ್ವೀಕರಿಸುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಸೈಬರ್ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಸಿಐಡಿ ಕಛೇರಿಯಲ್ಲಿ Centre for Cyber crime Investigation & Digital Forensic Training & Research" ಘಟಕವನ್ನು ಪ್ರಾರಂಭಿಸಲಾಗಿದ್ದು, Data Security Council of India ರವರ ಸಹಯೋಗದೊಂದಿಗೆ ವಿಶೇಷ ಸೈಬರ್ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ. ಬ್ಯಾಂಕಿಂಗ್ ಅಪರಾಧಗಳಿಗೆ ಸಂಬಂಧಿಸಿದಂತೆ ಆರ್.ಬಿ.ಐ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಬ್ಯಾಂಕಿಂಗ್ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಹಲವು ಪರಿಣಾಮಕಾರಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಸಾರ್ವಜನಿಕರ ಹಿತ ಕಾಪಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>• ರಾಜ್ಯದ ಎಲ್ಲಾ ಟೆಲಿಕಾಮ್ ಸೇವಾದಾರರನ್ನು (TSP) ಸಂಪರ್ಕಿಸಿ ಅವರ ಗ್ರಾಹಕರಿಗೆ ಬ್ಯಾಂಕಿಂಗ್ ಡೀಟೇಲ್ಸ್ |

ಮತ್ತು ಪಾಸ್‌ವರ್ಡ್‌ನ್ನು ಯಾರಿಗೂ ನೀಡಬಾರದೆಂದು ಸಮೂಹ ಸಂದೇಶಗಳನ್ನು (Group Messages) ರವಾನಿಸುವ ಮೂಲಕ ಸಾರ್ವಜನಿಕ ಗ್ರಾಹಕರಿಗೆ ಜಾಗೃತಿ ಮೂಡಿಸಲಾಗಿರುತ್ತದೆ.

- ಸಿಐಡಿಯ ಕಛೇರಿಯ ಸಿಸಿಐಟಿಆರ್ ವಿಭಾಗದಲ್ಲಿ ಕಳೆದ ಹಲವು ವರ್ಷಗಳಿಂದ ಮಿಲಿಟರಿ, ಬ್ಯಾಂಕಿಂಗ್ ಸೆಕ್ಟರ್, ಸರ್ಕಾರಿ ಸಂಸ್ಥೆಗಳು, ನ್ಯಾಯಾಂಗದ ಅಭಿಯೋಜಕರಿಗೆ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಕ್ರೈಂ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ, ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ.

- ಸೈಬರ್ ಕ್ರೈಂ ಅಪರಾಧದ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವ ಸಲುವಾಗಿ ಮುದ್ರಣ ಮಾಧ್ಯಮಗಳ (Print Media)ಮೂಲಕ ವರದಿಗಳನ್ನು ಪ್ರಕಟಿಸುವುದರ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

- ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಟ್ವೀಟರ್‌ಗಳ ಮೂಲಕ ಸೈಬರ್ ಜಾಗೃತಿಯ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ನೀಡಲಾಗುತ್ತಿದೆ.

- ಸೈಬರ್ ಜಾಗೃತಿ ಸಪ್ತಾಹವನ್ನು ಆಚರಿಸುವ ಮೂಲಕ ಕರಪತ್ರಗಳನ್ನು ಮುದ್ರಿಸಿ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಸೈಬರ್ ಅಪರಾಧಗಳನ್ನು ತಡೆಗಟ್ಟುವ ಬಗ್ಗೆ ಅರಿವನ್ನು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

- ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ಆರ್ಥಿಕ ಸ್ವರೂಪದ ಸೈಬರ್ ಅಪರಾಧವನ್ನು ತಡೆಗಟ್ಟಲು ಉಚಿತ ಸಹಾಯವಾಣಿ (ಟಾಲ್ ಫ್ರೀ) ಸಂ:1930 ಸೇವೆಯನ್ನು ಪ್ರಾರಂಭಿಸಿರುತ್ತದೆ. ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಒಡಂಬಡಿಕೆಯೊಂದಿಗೆ ಉಚಿತ ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಿ ದೂರು ದಾಖಲಿಸುವ ಹಾಗೂ ವಂಚನೆಗೆ ಬಳಕೆಯಾಗುವ ಬ್ಯಾಂಕ್ ಖಾತೆಗಳನ್ನು ತನಿಖೆಯ ಸಲುವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ.

- ಪೊಲೀಸರಿಗೆ ತರಬೇತಿ ನೀಡುವ ಸಲುವಾಗಿ ಆಧುನಿಕ ಸೈಬರ್ ಕ್ರೈಮ್ ಲ್ಯಾಬ್ ನ್ನು ಸ್ಥಾಪಿಸಿ ಆ ಮೂಲಕ ಎಲ್ಲಾ ಪೊಲೀಸರಿಗೆ AI, ಡೀಪ್‌ಫೇಕ್ (Deepfakes) ಹಾಗೂ ಇತರೆ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಅಪರಾಧಗಳ ಪತ್ತೆ ಮಾಡಲು ಹಾಗೂ ತನಿಖೆಗೆ ಅಗತ್ಯವಾದ ತರಬೇತಿಯನ್ನು ನೀಡಲಾಗುತ್ತಿದೆ.

- ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರವು (I4C) ಡಿಜಿಟಲ್ ಅರೆಸ್ಟ್ ಮತ್ತು ನಕಲಿ ಟ್ರೇಡಿಂಗ್‌ಗೆ

| | | |
|---|---|---|
| | | ಬಳಕೆಯಾಗುತ್ತಿದ್ದ ಸಾವಿರಾರು ವಾಟ್ಸಾಪ್ ಖಾತೆಗಳು ಹಾಗೂ ಸ್ಕೈಪ್ ಐಡಿಗಳನ್ನು ಗುರುತಿಸಿ ನಿರ್ಬಂಧಿಸಿದೆ.<br>• ವಿದೇಶಗಳಿಂದ ಭಾರತೀಯ ಮೊಬೈಲ್ ಸಂಖ್ಯೆಗಳಂತೆ ಬರುವ ನಕಲಿ ಹಾಗೂ ವಂಚನೆಯ ಕರೆಗಳನ್ನು (Spoofed Calls) ತಡೆಯಲು ಟೆಲಿಕಾಂ ಆಪರೇಟರ್‌ಗಳೊಂದಿಗೆ ಸೇರಿ ವಿಶೇಷ ತಂತ್ರಜ್ಞಾನವನ್ನು ಜಾರಿಗೊಳಿಸಲಾಗಿದೆ ಮತ್ತು ಲಕ್ಷಾಂತರ ನಕಲಿ ಸಿಮ್ ಕಾರ್ಡ್‌ಗಳನ್ನು ಬ್ಲಾಕ್ ಮಾಡಲಾಗಿದೆ.<br>• ಸೈಬರ್ ವಂಚನೆಗೆ ಸಂಬಂಧಿಸಿದಂತೆ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಮನ್ವಯ ಸಭೆಗಳನ್ನು ಏರ್ಪಡಿಸಿ ತನಿಖೆಗೆ ಸಹಕರಿಸಿ ಹಣ ಹಿಂದಿರುಗಿಸಲು ಸಹಾಯ ಮಾಡುವಂತೆ ಕೋರಲಾಗಿರುತ್ತದೆ. |

**ಸಂಖ್ಯೆ: ಹೆಚ್‌ಡಿ 69 ಪಿಸಿಕ್ಯೂ 2026**

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು